# ನಿಜವಾದ ಜ್ಞಾನ



❁ ಕಾಲಿಗೆ ಒಂದು ಮುಳ್ಳು ಚುಚ್ಚಿಕೊಂಡರೆ, ಅದನ್ನು ತೆಗೆದುಹಾಕಲು ಅವರು ಬೇರೊಂದು ಮುಳ್ಳನ್ನು ಹುಡುಕಿ ತಂದು, ಅದರ ಸಹಾಯದಿಂದ ಮುಳ್ಳನ್ನು ತೆಗೆದು ಹಾಕಿ, ಬಳಿಕ ಎರಡು ಮುಳ್ಳುಗಳನ್ನೂ ಬಿಸಾಡಿಬಿಡುತ್ತಾರೆ. ಅಜ್ಞಾನವೆಂಬ ಮುಳ್ಳನ್ನು ತೆಗೆದು ಹಾಕಲು ಜ್ಞಾನವೆಂಬ ಮುಳ್ಳನ್ನು ಉಪಯೋಗಿಸಬೇಕು. ಬಳಿಕ ಎರಡು ಮುಳ್ಳುಗಳನ್ನೂ ಬಿಸಾಡಿಬಿಟ್ಟರೆ ವಿಜ್ಞಾನ ದೊರೆಯುತ್ತದೆ. ಭಗವಂತನಿದ್ದಾನೆ ಎಂಬುದನ್ನು ತಿಳಿದು, ಆತನನ್ನು ವಿಶೇಷರೂಪದಿಂದ ಸಾಕ್ಷಾತ್ಕಾರ ಮಾಡಿಕೊಂಡು ಆತನೊಡನೆ ವಿಶೇಷರೂಪದಿಂದ ಬೆರೆಯಬೇಕು. ಇದಕ್ಕೇನೆ 'ವಿಜ್ಞಾನ' ಅಂತ ಹೆಸರು. ಈ ಕಾರಣದಿಂದಲೇ ಶ್ರೀಕೃಷ್ಣ ಅರ್ಜುನನಿಗೆ ಹೇಳಿದ, 'ತ್ರಿಗುಣಾತೀತನಾಗು' ಅಂತ.

❁ ಈ 'ವಿಜ್ಞಾನ'ವನ್ನು ಪಡೆಯಲೋಸುಗ ವಿದ್ಯಾಮಾಯೆಯನ್ನು ಆಶ್ರಯಿಸಬೇಕಾಗುತ್ತದೆ. ಭಗವಂತನೊಬ್ಬನೇ ಸತ್ಯ, ಜಗತ್ತು ಅನಿತ್ಯ ಎಂಬ ವಿಚಾರ ಅಂದರೆ ವೈರಾಗ್ಯ. ಭಗವಂತನ ನಾಮಗುಣಕೀರ್ತನೆ, ಧ್ಯಾನ, ಸಾಧುಸಂಗ, ಪ್ರಾರ್ಥನೆ ಇವೆಲ್ಲ ವಿದ್ಯಾಮಾಯೆಯ ಎಲ್ಲೆಯೊಳಗೇ ಇವೆ. ಚಾವಣಿಯನ್ನು ಮುಟ್ಟುವ ಮುನ್ನ ಸಿಕ್ಕುವ ಕೊನೆಯ ಕೆಲವು ಮೆಟ್ಟಲುಗಳಿಗೆ ವಿದ್ಯಾಮಾಯೆಯನ್ನು ಹೋಲಿಸಬಹುದು. ಅವನ್ನು ಹತ್ತಿದೊಡನೆಯೇ ಚಾವಣಿ, ಭಗವಂತನ ಸಾಕ್ಷಾತ್ಕಾರ.

❁ ಎಲ್ಲಿಯವರೆಗೆ 'ನಾನು' ಎಂಬ ನೀರಿನಲ್ಲಿ ಸೂರ್ಯನನ್ನು ನೋಡಬೇಕಾಗಿರುವುದೋ ಮತ್ತು ಸೂರ್ಯನನ್ನು ನೋಡಲು ಬೇರೆ ಯಾವ ಮಾರ್ಗವೂ ಇಲ್ಲವೋ, ಎಲ್ಲಿಯವರೆಗೆ ಪ್ರತಿಬಿಂಬಿತ ಸೂರ್ಯನನ್ನು ವಿನಾ ನಿಜವಾದ ಸೂರ್ಯನನ್ನು ನೋಡಲು ಯಾವ ಉಪಾಯವೂ ಇಲ್ಲವೋ, ಅಲ್ಲಿಯವರೆಗೆ ರೂಪಾಯಿಗೆ ಹದಿನಾರಾಣೆ ಭಾಗ ಪ್ರತಿಬಿಂಬಿತ ಸೂರ್ಯನೇ ಸತ್ಯ. ಆ ಪ್ರತಿಬಿಂಬಿತ ಸೂರ್ಯನೇ ಆದ್ಯಾಶಕ್ತಿ.

❁ ಬ್ರಹ್ಮಜ್ಞಾನ ಬೇಕಾಗಿದ್ದರೆ ಆ ಪ್ರತಿಬಿಂಬ ಸೂರ್ಯನನ್ನು ಹಿಡಿದುಕೊಂಡು ನಿಜವಾದ ಸೂರ್ಯನ ಕಡೆಗೆ ಹೋಗು. ನಮ್ಮ ಪ್ರಾರ್ಥನೆ ಕೇಳುತ್ತಾನಲ್ಲ ಆ ಸಗುಣಬ್ರಹ್ಮ, ಆತನನ್ನೇ ಕೇಳಿಕೊ, ಆತನೇ ಬ್ರಹ್ಮಜ್ಞಾನವನ್ನು ಕೊಡುತ್ತಾನೆ; ಹೇಗೆಂದರೆ ಯಾರು ಸಗುಣಬ್ರಹ್ಮನೊ ಆತನೇ ನಿರ್ಗುಣಬ್ರಹ್ಮ. ಯಾರು ಶಕ್ತಿಯೋ ಆತನೇ ಬ್ರಹ್ಮ. ಪೂರ್ಣಜ್ಞಾನ ದೊರೆತ ಮೇಲೆ ಈ ಅಭಿನ್ನತೆಯ ಅನುಭವ.

❁ ನಾನು ಎಲ್ಲವನ್ನೂ ಅಂಗೀಕರಿಸುತ್ತೇನೆ; ತುರೀಯ ಮತ್ತು ಜಾಗ್ರತ್ ಸ್ವಪ್ನ ಸುಷುಪ್ತಿ; ನಾನು ಈ ಮೂರು ಅವಸ್ಥೆಗಳನ್ನೂ ಅಂಗೀಕರಿಸುತ್ತೇನೆ. ಎಲ್ಲವನ್ನು ಒಟ್ಟಿಗೆ ಸೇರಿಸಿ ಅಂಗೀಕರಿಸದೆ ಇದ್ದರೆ ತೂಕ ಕಡಿಮೆ ಬಿದ್ದುಬಿಡುತ್ತದೆ.

❁ ಬ್ರಹ್ಮ-ಜೀವಜಗತ್ ವಿಶಿಷ್ಟ (ಜೀವಜಗತ್ ಎಲ್ಲವೂ ಕೂಡಿ). ಮೊದಲು 'ನೇತಿ' 'ನೇತಿ' ಎಂಬ ಮಾರ್ಗವನ್ನು ಅನುಸರಿಸುವಾಗ ಜೀವ-ಜಗತ್ತನ್ನು ಬಿಟ್ಟುಬಿಡಬೇಕಾಗುತ್ತದೆ. 'ಅಹಂ' ಬುದ್ಧಿ ಎಲ್ಲಿಯವರೆಗೆ ಇರುವುದೋ ಅಲ್ಲಿಯವರೆಗೆ ಆತನೇ ಎಲ್ಲವೂ ಆಗಿದ್ದಾನೆ ಎಂಬ ಬೋಧೆ ಇರುತ್ತದೆ; — ಆತನೇ ಚತುರ್ವಿಂಶತಿ ತತ್ತ್ವ ಆಗಿದ್ದಾನೆ. ಬೇಲದ ಹಣ್ಣಿನ ಮುಖ್ಯ ಭಾಗ ಯಾವುದು ಎಂದರೆ ಜನರಿಗೆ ಅರ್ಥವಾಗುತ್ತದೆ, ಅದರ ತಿರುಳು ಮಾತ್ರವೇ ಅಂತ. ಆಗ ಅದರ ಬೀಜ ಮತ್ತು ಓಟೆಯನ್ನು ಗಣನೆಗೆ ತೆಗೆದುಕೊಳ್ಳದೆ ಹೋಗಬೇಕಾಗುತ್ತದೆ. ಆದರೆ ಬೇಲದ ಹಣ್ಣಿನ ತೂಕ ಕಂಡು ಹಿಡಿಯಬೇಕಾದರೆ ಬರೀ ತಿರುಳನ್ನು ತೂಗಿದರೇ ಸಾಲದು. ತಿರುಳು, ಓಟೆ, ಬೀಜ ಎಲ್ಲವನ್ನೂ ಸೇರಿಸಿ ತೂಗಬೇಕಾಗುತ್ತದೆ. ತಿರುಳು ಯಾವುದರದ್ದೊ, ಅದರದೇ ಬೀಜ ಮತ್ತು ಓಟೆ.

❁ ನಿತ್ಯ ಯಾರದೊ ಆತನದೇ ಲೀಲೆ ಕೂಡ. ಅದಕ್ಕಾಗಿಯೆ ನಾನು ನಿತ್ಯ ಲೀಲೆ ಎಲ್ಲವನ್ನೂ ಸ್ವೀಕರಿಸುವುದು. ಸಂಸಾರ, ಜಗತ್ತು ಮಾಯಾ ಅಂತ ಅದನ್ನು ಗಾಳಿಯಲ್ಲಿ ಹಾರಿಸಿಬಿಡುತ್ತಿಲ್ಲ. ಹಾಗೆ ಮಾಡಿದರೆ ತೂಕ ಕಡಿಮೆ ಆಗಿಬಿಡುತ್ತದೆ.

❁ ಜ್ಞಾನಯೋಗ ಎಂಬುದು ಯಾವುದು? ಯಾವ ಮಾರ್ಗದಿಂದ ಸ್ವಸ್ವರೂಪವನ್ನು ಅರಿಯಬಹುದೊ ಅದು; ಬ್ರಹ್ಮವೇ ನನ್ನ ಸ್ವರೂಪವೆಂಬ ಬೋಧೆಯಾಗುತ್ತದೆ. ಪ್ರಹ್ಲಾದ ಕೆಲವು ವೇಳೆ ತನ್ನ ಸ್ವಸ್ವರೂಪದಲ್ಲಿ ಇರುತ್ತಿದ್ದ. ಇನ್ನು ಕೆಲವು ವೇಳೆ ಆತನಿಗೆ ತಾನು ಪ್ರತ್ಯೇಕ ಭಗವಂತ ಪ್ರತ್ಯೇಕ ಎಂಬುದಾಗಿ ತೋರುತ್ತಿತ್ತು; ಆಗ ಭಕ್ತಿಯ ಭಾವದಲ್ಲಿ ಇರುತ್ತಿದ್ದ.

❁ ಹನುಮಂತ ಹೇಳಿದ, 'ಓ ರಾಮ, ''ನೀನು ಪೂರ್ಣ, ನಾನು ಅಂಶ'' ಅಂತ ಕೆಲವು ವೇಳೆ ಅನುಭವವಾಗುತ್ತದೆ. ''ನೀನು ಪ್ರಭು, ನಾನು ದಾಸ'' ಅಂತ ಇನ್ನು ಕೆಲವು ವೇಳೆ ಅನುಭವವಾಗುತ್ತದೆ. ಮತ್ತೆ ರಾಮ, ''ನೀನೇ ನಾನು. ನಾನೇ ನೀನು'' ಅಂತ ತತ್ತ್ವಜ್ಞಾನ ದೊರೆತಾಗ ಅನುಭವವಾಗುತ್ತದೆ.'

**ಶ್ರೀರಾಮಕೃಷ್ಣ ವಚನವೇದದಿಂದ**